**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 1124/2022**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಅಕ್ಕನಾಗಮ್ಮ ಗಂಡ ಬಸಣ್ಣ ಮತ್ತು ಇತರರು.**

**ದೋಷರೋಪಣೆ**

ನಾನುಃ **ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ** ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಯಾದ

| | |
|---|---|
| ಆರೋಪಿಃ1 | ಅಕ್ಕನಾಗಮ್ಮ ಗಂಡ ಬಸಣ್ಣ ಬಾವರ, |
| 2. | ಭೀಮರಾಯ ಶಾಸ್ತಿ ತಂದೆ ಸಂಗಪ್ಪ ಬಾವರ, |
| 3. | ಹಣಮಂತ ತಂದೆ ಭೀಮರಾಯ ಬಾವರ, |
| 4. | ಭಾಗಣ್ಣ ತಂದೆ ಭೀಮರಾಯ ಬಾವರ, |
| 5. | ಮೌನೇಶ ತಂದೆ ಭೀಮರಾಯ ಬಾವರ, |
| 6. | ಚಂದಪ್ಪ ತಂದೆ ಭೀಮರಾಯ ಬಾವರ, |

**ನಿಮ್ಮ ವಿರುದ್ಧ ದೋಷಿಸುವ ದೋಷರೊಪಣೆ ಏನೆಂದರೆ,**

ಮೊದಲನೆಯದಾಗಿ ದಿನಾಂಕ: 09-10-2021 ರಂದು ಸಾಃ 06-30 ಗಂಟೆ ಸುಮಾರಿಗೆ ಯಾದಗಿರಿ (ಗ್ರಾ) ಪೋಲಿಸ ಠಾಣೆಯ ವ್ಯಪ್ತಿಯಲ್ಲಿ ಬರುವ ಅಚೋಲಾ ಗ್ರಾಮದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಹೋಗಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ

ಕಲಂ.143 ಸಹ ಕಲಂ. 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ದೊಂಬಿ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಹೋಗಿ ದೊಂಬಿ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.147 ಸಹ ಕಲಂ. 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ದಿನಾಂಕ 16-06-2019 ರಂದು ಚಾಸಾಃ4 ರವರ ಮನೆಗೆ ಬಂದು ಕೈಯಿಂದ ಬರೆದ ಒಂದು ನೂರು ರೂಪಾಯಿ ಬೆಲೆಯ ಸ್ಟಾಂಪನ್ನು ತೋರಿಸಿ ಅದರಲ್ಲಿ ತನ್ನ ಹೆಸರಿನಲ್ಲಿ ಇವರು ಜಮೀನು ಸರ್ವೆ ನಂ. 21/1 ನೇದ್ದರ ಯಾವುದೇ ಸಾಲ ಮತ್ತು ಕೋರ್ಟ್ ಕೇಸು ಇರುವುದಿಲ್ಲ ಎಂದು ಹೇಳಿ 7,20,000/- ಚಾಸಾಃ4 ರವರಿಂದ ಪಡೆದುಕೊಂಡಿದ್ದು, ಮುಂದುವರೆದು ಸದರಿ ಜಮೀನಿನ ಪಹಣಿಯನ್ನು ಪರಿಶೀಲಿಸಿದಾಗ, ಸದರಿ ಖರೀದಿ ಕರಾರು ಪತ್ರದಲ್ಲಿ ಚಾಸಾಃ4 ರವರ ಜಮೀನು ಸರ್ವೆ ನಂ. 21/2 ಎಂದು ನಮೂದು ಇರುತ್ತದೆ. ಮುಂದುವರೆದು, ಸದರಿ ಜಮೀನು ಸರ್ವೆ ನಂ. 21/1 ರ ಜಮೀನಿನ ಮೇಲೆ ಅಸಲು ದಾವಾ ನಂ. 86/2020 ಆದೇಶದ ಪ್ರಕಾರ ಮಾರಾಟ ಮಾಡಬಾರದೆಂದು ತಡೆಯಾಜ್ಞೆ ಇದ್ದರೂ, 1 ನೇ ಆರೋಪಿಯಾದ ನೀನು ನ್ಯಾಯಾಲಯ ಆದೇಶವನ್ನು ಮುಚ್ಚಿಟ್ಟು ಮತ್ತು ಸಾಲವನ್ನು ಪಡೆದ ಬಗ್ಗೆ ಮಾಹಿತಿ ಮುಚ್ಚಿಟ್ಟು ಮೋಸದಿಂದ ಮತ್ತು ಅಪ್ರಾಮಣಿಯಕವಾಗಿ ಚಾಸಾಃ4 ರವರಿಗೆ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಿರಾ ಆ ಮೂಲಕ, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ

ಕಲಂ.420, 423 ಸಹ ಕಲಂ.149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಚಾಸಾಃ1 ರವರಿಗೆ ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 14-08-2025**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ.**